# ಲೋಕನಾಥ್: ಈಸ್ಟ್‌ಮನ್ ನೆನಪುಗಳು...

ನಟನೆಯ ಕನಸನ್ನೇ ಕಾಣದ ವ್ಯಕ್ತಿ ಕನ್ನಡ ಚಿತ್ರರಂಗದಲ್ಲಿ ಕಲಾವಿದನಾಗಿ ಉಳಿಸಿಹೋಗಿರುವ ಹೆಜ್ಜೆಗಳು ಅಚ್ಚರಿ ಮೂಡಿಸುವಂತಹವು. ನಟನಾಗಿ ಮಾತ್ರವಲ್ಲದೆ, ತಮ್ಮ ವ್ಯಕ್ತಿತ್ವದ ಮೂಲಕವೂ ಲೋಕನಾಥ್ ಚಿತ್ರೋದ್ಯಮದ ಪಾಲಿಗೆ ನಿಜವಾದ ಅರ್ಥದಲ್ಲಿ 'ಅಂಕಲ್' ಎನ್ನಿಸಿಕೊಂಡಿದ್ದರು.

■ ರಘುನಾಥ ಚ.ಹ.
ಚಿತ್ರಗಳು: ಭವಾನಿ ಲಕ್ಷ್ಮಿನಾರಾಯಣ



ಕನ್ನಡ ಚಿತ್ರರಸಿಕರಿಗೆ ಲೋಕನಾಥ್ (ಆಗಸ್ಟ್ 14, 1927 – ಡಿಸೆಂಬರ್ 31, 2018) ಓರ್ವ ಸಹೃದಯಿ ಕಲಾವಿದನಾಗಿ ಪರಿಚಿತರು. ದೊಡ್ಡ ದೇಹದ ಹಾಗೂ ಅಷ್ಟೇ ದೊಡ್ಡ ವ್ಯಕ್ತಿತ್ವದ ಲೋಕನಾಥ್‌ರ ವೈಯಕ್ತಿಕ ಬದುಕು ಕೂಡ ಅವರ ಕಲೆಯಷ್ಟೇ ಘನವಾದುದು.

ಮಧ್ಯಮವರ್ಗದಿಂದ ಬಂದ ವ್ಯಕ್ತಿಯೊಬ್ಬ ಕಲಾವಿದನಾಗಿ ರೂಪುಗೊಂಡ ಕಥೆ 'ಈಸ್ಟ್‌ಮನ್' ಸಿನಿಮಾಕ್ಕಿಂಥ ಭಿನ್ನವೇನಲ್ಲ. ಅವರ ಮದುವೆಯ ಕಥೆಯನ್ನು ಕೇಳಿ. ಒಂದು ದಿನ, 'ಮದುವೆಗೆ ಹೋಗೋಣ ನಡೆ' ಎಂದು ಹೆತ್ತವರು ಹೊರಡಿಸಿದಾಗ ಲೋಕನಾಥ್ ಕುತೂಹಲದಿಂದ ಕೇಳಿದ್ದು – 'ಯಾರ ಮದುವೆ?'. ನಿನ್ನದೇ ಮದುವೆ ಎಂದು ಅಪ್ಪ ಹೇಳಿದಾಗ ಚಿಗುರುಮೀಸೆ ಹುಡುಗ ತಬ್ಬಿಬ್ಬು. ಹುಡುಗಿಯನ್ನೇ ನೋಡದೆ ಮದುವೆ ಆಗುವುದು ಹೇಗೆ ಎಂದು ಹುಡುಗ ಹಿಂದೆಮುಂದೆ ನೋಡಿದರೂ ಮನೆಯವರು ಬಿಡಬೇಕಲ್ಲ. 'ಸುಮ್ಮನೆ ತರಲೆ ಮಾಡಬೇಡ. ಮದುವೆ ಮಂಟಪದಲ್ಲಿ ಹುಡುಗಿಯನ್ನು ನೋಡುವೆಯಂತೆ ನಡೆ' ಎಂದು ಹೊರಡಿಸಿಬಿಟ್ಟರು. ವರ ಮುಸುಮುಸಿ ಎನ್ನುತ್ತಲೇ ಮದುವೆ ಮುಗಿಯಿತು.